ಮೈಸೂರು–ಬೆಂಗಳೂರು ಜೋಡಿರೈಲು ಮಾರ್ಗ

1404(1753); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ಮೈಸೂರು–ಬೆಂಗಳೂರು ಜೋಡಿ ರೈಲು ಮಾರ್ಗದ ಕಾಮಗಾರಿ ಯಾವ ಹಂತದಲ್ಲಿದೆ; ಸದರಿ ಕಾಮಗಾರಿ ಯಾವಾಗ ಪೂರ್ಣಗೊಳ್ಳಲಿದೆ;

ಆ) ಈ ಕಾಮಗಾರಿಗೆ ಸಂಬಂಧಿಸಿದಂತೆ ಮಂಡ್ಯ ಜಿಲ್ಲೆಯಲ್ಲಿದ್ದ ಭೂಸ್ವಾಧೀನ ಸಮಸ್ಯೆ ಬಗೆಹರಿದಿದೆಯೇ;

ಇ) ಶ್ರೀರಂಗಪಟ್ಟಣದ ಟಿಪ್ಪು ಮದ್ದಿನಮನೆಯ ಸ್ಥಳಾಂತರ ಕಾಮಗಾರಿ ಯಾವ ಹಂತದಲ್ಲಿದೆ ಹಾಗೂ ಯಾವಾಗ ಸ್ಥಳಾಂತರಿಸಲಾಗುವುದು;

ಈ) ಈ ಯೋಜನೆಗೆ ಇದುವರೆಗೆ ಕೇಂದ್ರ ರೈಲ್ವೆ ಇಲಾಖೆ ಮಂಜೂರು ಮಾಡಿ ಬಿಡುಗಡೆ ಮಾಡಿರುವ ಹಣ, ರಾಜ್ಯ ಸರ್ಕಾರ ನೀಡಿರುವ ಮ್ಯಾಚಿಂಗ್ ಗ್ರಾಂಟ್ಸ್ ಎಷ್ಟು;

ಉ) ಸದರಿ ಕಾಮಗಾರಿ ಪೂರ್ಣಗೊಳಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಗೊಳಿಸಬೇಕಾದ ಹಣ ಬಾಕಿ ಇದೆಯೇ;

ಶ್ರೀ ಆರ್. ರೋಷನ್ ಬೇಗ್ (ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು)

ಅ) 138 ಕಿ.ಮೀ. ದ್ವಿಪಥ ಈ ಯೋಜನೆಯಲ್ಲಿ 110 ಕಿ.ಮೀ. ಪೂರ್ಣಗೊಂಡು ಸಾರ್ವಜನಿಕರ ಸಂಚಾರಕ್ಕೆ ತೆರವುಗೊಳಿಸಲಾಗಿದೆ. ಹಾಗೂ 27 ಕಿ.ಮೀ. ಕಾಮಗಾರಿಯು ಪೂರ್ಣಗೊಂಡಿದ್ದು ಸದರಿ ಕಾಮಗಾರಿಯಲ್ಲಿ ಶ್ರೀರಂಗಪಟ್ಟಣದ ಟಿಪ್ಪು ಮದ್ದಿನಮನೆ ವ್ಯಾಪ್ತಿಯಲ್ಲಿ ಬರುವ 1 ಕಿ.ಮೀ ಹೊರತು ಪಡಿಸಿ, ಉಳಿದ ದ್ವಿಪಥ ಕಾಮಗಾರಿ ಅಕ್ಟೋಬರ್ 2015 ರಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇದೆ.

ಆ) ಮಂಡ್ಯ ಜಿಲ್ಲೆಯ ಬ್ಯಾಡರಹಳ್ಳಿಯಲ್ಲಿನ 1 ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳುವ ಸಮಸ್ಯೆ ಶೀಘ್ರವಾಗಿ ಬಗೆಹರಿಸಲು ಕ್ರಮವಹಿಸಲಾಗುತ್ತಿದೆ.

ಇ) ಟಿಪ್ಪು ಮದ್ದಿನಮನೆಯ ಸ್ಥಳಾಂತರ ಕಾಮಗಾರಿ ಪ್ರಗತಿಯಲ್ಲಿದ್ದು, ಮಾರ್ಚ್ 2016 ಕ್ಕೆ ಪೂರ್ಣವಾಗಿ ಸ್ಥಳಾಂತರಿಸುವ ಸಾಧ್ಯತೆ ಇದೆ.

ಈ) ಈವರೆವಿಗೂ ರೈಲ್ವೆ ಇಲಾಖೆ ಬಿಡುಗಡೆ ಮಾಡಿರುವ ಒಟ್ಟು ಹಣ ರೂ. 370.59 ಕೋಟಿಗಳು

ಈವರೆವಿಗೂ ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಹಣ ರೂ. 468.14 ಕೋಟಿಗಳು

ಉ) ರಾಜ್ಯದಿಂದ ರೂ. 35.84 ಕೋಟಿಗಳು ಬಿಡುಗಡೆಗೆ ಬಾಕಿ ಇರುತ್ತದೆ.

ಪ್ರವಾಸೋದ್ಯಮ ಅಭಿವೃದ್ಧಿ

1405(1754); ಶ್ರೀ ಚೆಲುವರಾಯ ಸ್ವಾಮಿ ಎನ್. (ನಾಗಮಂಗಲ)

ಅ) ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳು ಮತ್ತು ಕನಕಪುರ ತಾಲ್ಲೂಕಿನ ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಕಾವೇರಿ ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸಲಾಗಿದೆಯೇ; (ಪ್ರಾಧಿಕಾರದ ರಚನೆ ಹಾಗೂ ಕಾರ್ಯನೀತಿಯ ಬಗ್ಗೆ ವಿವರಗಳನ್ನು ಒದಗಿಸುವುದು)

ಆ) ಈ ಪ್ರಾಧಿಕಾರಕ್ಕೆ ಯಾವ ರೀತಿಯ ಅಧಿಕಾರವನ್ನು ನೀಡಲಾಗಿದೆ ಹಾಗೂ ಪ್ರಾಧಿಕಾರಕ್ಕೆ ಪ್ರತ್ಯೇಕವಾಗಿ ಒದಗಿಸಿರುವ ಆಯವ್ಯಯವೆಷ್ಟು;

ಇ) ಕಾವೇರಿ ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿ ಬರುವ ಪ್ರವಾಸಿ ಸ್ಥಳಗಳು ಯಾವುವು; ಇವುಗಳ ಅಭಿವೃದ್ಧಿಗೆ ಪ್ರಾಧಿಕಾರದ ಮೂಲಕ ಹಮ್ಮಿಕೊಂಡಿರುವ ಯೋಜನೆಗಳು ಯಾವುವು (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)